ದಿನಾಂಕ: 19-02-2025 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು: ಶ್ರೀ. ವಿ. ಜಿ. ಎಸ್. ವಕೀಲರಿಂದ

7. ನಾನು ಟೈಲರಿಂಗ್ ಕೆಲಸವನ್ನು ನಮ್ಮ ಮನೆಯಲ್ಲಿದ್ದ ಮಳಿಗೆಯಲ್ಲಿಯೇ ಮಾಡುತ್ತಿದ್ದೆ. ಅದನ್ನು 2012 – 13 ರಲ್ಲಿಯೇ ಮಾರಾಟ ಮಾಡಿದ್ದೇನೆ. ಈಗ ಮನೆಯಲ್ಲಿಯೇ ಟೈಲರಿಂಗ್ ಮಾಡುತ್ತಿದ್ದೇನೆ. ಆರೋಪಿ ರಮ್‌ಜಾನ್ ಬೆನಫಿಟ್ ಕಾರ್ಡ್ ನಡೆಸುತ್ತಿದ್ದು, ಒಂದು ಕಾರ್ಡ್ ಗೆ 2,000/- ಹಣ ಅಥವಾ ದಿನಸಿ ತೆಗೆಯಬಹುದಿತ್ತು ಎಂದರೆ ಸರಿ. ಈ ವರ್ಷ ಕಾರ್ಡ್ ತೆಗೆದುಕೊಂಡರೆ ಮುಂದಿನ ವರ್ಷ ರಮ್‌ಜಾನ್ ಗೆ ರೇಷನ್ ತೆಗೆದುಕೊಳ್ಳಬಹುದು ಎನ್ನುವುದು ಸರಿ. ನಾನು ಆರೋಪಿಯ ಬಳಿ 20 – 25 ಕಾರ್ಡ್ ತೆಗೆದುಕೊಂಡಿದ್ದೇನೆ. ನಾನೇ ನೇರವಾಗಿ ಆರೋಪಿಯಿಂದ ಸದರಿ ಕಾರ್ಡ್ ಗಳನ್ನು ಪಡೆದಿರುತ್ತೇನೆ.

8. 2020 ರಲ್ಲಿ ಖುರಂ ಪಾಷ ರವರು ಸಿಸಿ. ನಂಬರ್ 37/2022 ರ ಫಿರ್ಯಾದುದಾರರಾಗಿದ್ದು ಅವರು ಆರೋಪಿಯ ಬಳಿ 140 ಕಾರ್ಡ್ ಗೆ ಪಡೆದಿದ್ದು, ಅದಕ್ಕೆ ಉಚಿತವಾಗಿ 10 ಕಾರ್ಡ್ ಒಟ್ಟು 150 ಕಾರ್ಡ್ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ ಇನ್ನೂ 10 ಕಾರ್ಡ್ ಹೆಚ್ಚುವರಿಯಾಗಿ ಕೊಡುವಂತೆ ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗಸ್ಟ್ 9, 2021 ರಲ್ಲಿ ಎಲ್ಲಾ ಕಾರ್ಡ್ ಗಳಿಗೆ ದಿನಸಿ ಕೊಟ್ಟರು ಎಂದರೆ ಸರಿ. ಸದರಿ 140 ಕಾರ್ಡ್ ಗಳಿಗೆ ಭದ್ರತೆಗಾಗಿ ಖುರಂ ಪಾಷ ರವರು ನಿಪಿ.1 ನ್ನು ಮತ್ತು ಆ ಪ್ರಕರಣದ ಚೆಕ್ ನ್ನು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಬಳಿ ನಾನು ಯಾವುದೇ ಕಾರ್ಡ್ ಪಡೆದಿಲ್ಲ, ನಾನು, ಖುರಂ ಪಾಷ ಮತ್ತು ಅವರ ಸಹೋದರಿ ಸೇರಿ ಆರೋಪಿ ಭದ್ರತೆಗೆ ಕೊಟ್ಟಿದ್ದ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನೂರಜಾನ್ ರವರು ನನಗೆ ಪರಿಚಯ ಇಲ್ಲ. ಖುರಂ ಪಾಷ 10 ಕಾರ್ಡ್ ಹೆಚ್ಚು ಕೇಳುವ ವಿಚಾರಕ್ಕೆ ಆರೋಪಿಯ ಜೊತೆ ವಿವಾದ ಆಗಿದ್ದು, ಅದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

9. ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ. ನಾನು ರೂ. 8 – 9 ಲಕ್ಷ ಮನೆಯಲ್ಲಿ ಇಟ್ಟುಕೊಂಡಿಲ್ಲ. ಆರೋಪಿಗೆ ಸೇರಿದ ಪಡಿತರ ಚೀಟಿ ಎನ್. ಆರ್. ಮೊಹಲ್ಲಾದಲ್ಲಿ ಇದೆ. ಆರೋಪಿ ಆಧಾರ್ ಕೊಟ್ಟಿದ್ದರಿಂದ ವಿಳಾಸ ಗೊತ್ತಾಯಿತು. ನನ್ನ ನಾದಿನಿಯ ಎದುರು ಹಣ ಕೊಡಲು ತೊಂದರೆ ಇರಲಿಲ್ಲ. ನಿಪಿ.5 ರಲ್ಲಿ ಆರೋಪಿಯ ಪೂರ್ಣ

ವಿಶಾಸ ಇಲ್ಲ ಎಂದರೆ ಸರಿಯಲ್ಲ. ನಿಪಿ.5 ನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಅಂಗಡಿ ಸ್ವಂತ ಅಥವಾ ಬಾಡಿಗೆ ಎನ್ನುವುದು ಗೊತ್ತಿಲ್ಲ. ಆರೋಪಿ ಬೇರೆ ಏನು ಕೆಲಸ ಮಾಡುತ್ತಾರೆ ಗೊತ್ತಿಲ್ಲ. ಆರೋಪಿಯ ವಾರ್ಷಿಕ ಆದಾಯ ಗೊತ್ತಿಲ್ಲ. ಆರೋಪಿಯ ಗಂಡನಿಗೆ ಹಣ ಕೊಟ್ಟಿರುವ ವಿಚಾರ ತಿಳಿಸಿಲ್ಲ, ತಿಳಿಸಲು ಅವರ ಮಾಹಿತಿ ನನಗೆ ಇಲ್ಲ. ಆರೋಪಿಗೂ ಮತ್ತು ನನಗೂ ಈ ಮೊದಲೂ ಬೇರೆ ವ್ಯವಹಾರ ಮಾಡಿಲ್ಲ. ನಿಪಿ.1 ರಲ್ಲಿರುವ ಬರವಣಿಗೆ ಮತ್ತು ಸಹಿ ಮೂರುವರೆ ವರ್ಷಗಳ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಈ ಬಗ್ಗೆ ತಜ್ಞರ ವರದಿ ಪಡೆಯಲು ತೊಂದರೆ ಇಲ್ಲ. ಆರೋಪಿ ನನಗೆ ಪರಿಚಯವೇ ಇಲ್ಲ, ಆರೋಪಿ ಹಣ ಕೇಳಿದರು ನಾನು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಿಪಿ.1 ನ್ನು ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ಆರ್ಥಿಕವಾಗಿ ಸಮರ್ಥರಿದ್ದು, ಅವರಿಗೆ ಸಾಲ ಕೊಡುವ ಅವಶ್ಯಕತೆ ಇರಲಿಲ್ಲ, ನನಗೂ ಕೂಡ ಅಷ್ಟು ಸಾಲ ಕೊಡಲು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸ್ ಕೊಟ್ಟಿರುವುದಾಗಿ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ ಅವರಿಂದ ಅಕ್ರಮ ಲಾಭ ಪಡೆಯುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಾಲಕ್ಕೆ ನಿಪಿ.1 ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ